**ಪಿಡಬ್ಲೂಃ 1** **ಸಿ.ಸಿ ನಂ.982/2021**

ದಿನಾಂಕ **01-03-2024** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀಮತಿ.ಎಂ.ಬಿ. ಎಸ್ ಆರೋಪಿ ಪರ ವಕೀಲರಿಂದಃ-**

1. ಆರೋಪಿ ನಮ್ಮ ಊರಿನಲ್ಲಿ ಅಂಗಡಿ ಹಾಕಿಕೊಂಡಿದ್ದರು ಹಾಗಾಗಿ ಪರಿಚಯ ಇತ್ತು. ಆರೋಪಿ ನನಗೆ 10 ವರ್ಷಗಳಿಂದ ಪರಿಚಯ ಇದ್ದಾರೆ. ಯಾರ ಮೂಲಕ ಪರಿಚಯ ಆಯಿತ್ತು ಎಂದರೆ ಸಾಕ್ಷಿಯು ಅವರ ಅಂಗಡಿಗೆ ವ್ಯಾಪಾರಕ್ಕಾಗಿ ಹೋಗುತ್ತಿದ್ದೆ, ಆದ್ದರಿಂದ ಅವರ ಪರಿಚಯ ಆಗಿತ್ತು.

2. ಆರೋಪಿ ಈಗ ಏನು ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅಂಗಡಿ ಮಾರಿ ಬೇರೆ ಕೆಲಸ ಮಾಡುತ್ತಿದ್ದಾರೆ ಎನ್ನುತ್ತಾರೆ. ಆರೋಪಿ ಈಗ ಬೆಂಗಳೂರಿನಲ್ಲಿ ವಾಸವಿದ್ದಾರೆ. ಏನು ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಮೊಬೈಲ್ ಅಂಗಡಿಯಲ್ಲಿ ಏನೋ ಕೆಲಸ ಮಾಡುತ್ತಿದ್ದಾರೆ ಅಂತಾ ತಿಳಿಯಿತು ಎನ್ನುತ್ತಾರೆ.

3. ಆರೋಪಿಯ ತಿಂಗಳ ಮತ್ತು ವಾರ್ಷಿಕ ಆದಾಯದ ಬಗ್ಗೆ ನನಗೆ ಗೊತ್ತಿಲ್ಲ.

4. ಆರೋಪಿಯ ಮನೆಗೂ ನಮ್ಮ ಮನೆಗೂ 10 ಮನೆಗಳು ಅಂತರ ಇದೆ. ಆ ಕಾಲಕ್ಕೆ ಆರೋಪಿಯ ಮನೆಯಲ್ಲಿ ಅವರ ತಂದೆ, ತಾಯಿ, ಆರೋಪಿ, ಆತನ ಹೆಂಡತಿ ಮತ್ತು ಮಕ್ಕಳು ಇದ್ದರು.

5. ನಾನು ರೇಷ್ಮೇ ಹುಳು ಮತ್ತು ಸೀಮೆ ಹಸು ಮೇಯಿಸುವ ಕೆಲಸ ಮತ್ತು ಹಾಲು ಹಾಕುವ ಕೆಲಸ ಮಾಡುತ್ತಿದ್ದೇನೆ. ನನ್ನದು 2 ಎಕರೆ ಜಮೀನು ಇದೆ. ನನ್ನದ್ದು 2 ಎಕರೆ ಜಮೀನು ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಕೊಟ್ಟಿರುತ್ತೇನೆ. ಆ 2 ಎಕರೆ ಜಮೀನಿನಲ್ಲಿ ರೇಷ್ಮೇ ಸೊಪ್ಪು ಮತ್ತು ಹಸುಗಳನ್ನು ಮೇಯಿಸಲು ಜಾಗ ಇದೆ ಎನ್ನುತ್ತಾರೆ. ಅದರಿಂದ

ನನಗೆ ತಿಂಗಳಿಗೆ 20–25 ಸಾವಿರ ಆದಾಯ ಇದೆ. ಹಾಲು ಹಾಕಿದ್ದರ ಬಗ್ಗೆ ಬಿಲ್ಲುಗಳು ನನ್ನ ಹತ್ತಿರ ಇಲ್ಲ.

6. ನಮ್ಮ ಮನೆಯಲ್ಲಿ 6 ಜನ ಇದ್ದೇವೆ. ನನ ಮಗ ಎಂ ಸಿ ಎ ಮಾಡುತ್ತಿದ್ದಾನೆ, ಮಗಳು ಸ್ವಲ್ಪ ಅಂಗವಿಕಲಳು ಇದ್ದಾಳೆ, ಅವಳಿಗೆ 18 ವರ್ಷ ವಯಸ್ಸು, ಅವಳಿಗೆ 3 ವರ್ಷದಿಂದ ಶುಗರ್ ಕಾಯಿಲೆ ಇದೆ.

7. ನನ್ನ ಮಗ ಕ್ರೈಸ್ತ ಕಾಲೇಜಿನಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದಾನೆ. ನನ್ನ ಮಗನ 1 ವರ್ಷದ ವಿಧ್ಯಾಭ್ಯಾಸದ ಖರ್ಚು 1 ಲಕ್ಷ ರೂ. ನನ್ನ ತಂದೆ ತಾಯಿಗೆ ವಯಸ್ಸಾಗಿದೆ ಎಂದರೆ ಸರಿ. ನನ್ನ ತಂದೆ ತಾಯಿಯ ವೈಧ್ಯಕೀಯ ಖರ್ಚು ಪ್ರತಿ ತಿಂಗಳಿಗೆ 5 ಸಾವಿರ ಎಂದರೆ ಸರಿ.

8. ನನ್ನ ಸಂಸಾರದ ಖರ್ಚನ್ನು ನಾನೇ ನೋಡಿಕೊಳ್ಳುತ್ತೇನೆ. 2 ಎಕರೆ ಜಮೀನಿನ ಮೇಲೆ ಇದುವರೆಗೂ ಮಾಡಿಲ್ಲ, ಈಗ ಮಾಡಿದ್ದೇವೆ. ಡಿ ಸಿ ಸಿ ಬ್ಯಾಂಕ್ ನಲ್ಲಿ ಸಾಲ ಮಾಡಿದ್ದೇನೆ. ನನ್ನದು ಡಿ ಸಿ ಸಿ ಬ್ಯಾಂಕ್ ಮತ್ತು ಗ್ರಾಮೀಣ ಬ್ಯಾಂಕ್ ನಲ್ಲಿ ಮಾತ್ರ ಖಾತೆಗಳು ಇವೆ.

9. ನಿಮ್ಮ ಖಾತೆಯಲ್ಲಿ ಹಣ ಯಾವ ವರ್ಷ ಹೆಚ್ಚಿಗೆ ಇತ್ತು ಎಂದರೆ ಸಾಕ್ಷಿಯು ಅದನ್ನು ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಆರೋಪಿಗೆ ಚೆಕ್ ಮುಖಾಂತರ ಹಣ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನ್ನ ಹತ್ತಿರ ಚೆಕ್ ಇಲ್ಲ ಎನ್ನುತ್ತಾರೆ. ಡಿ ಸಿ ಸಿ ಬ್ಯಾಂಕ್ ನಲ್ಲಿ ನೀವು ಚೆಕ್ ಪುಸ್ತಕವನ್ನು ಪಡೆದೇ ಇಲ್ಲವೇ ಎಂದರೆ ಸಾಕ್ಷಿಯು ಡಿ ಸಿ ಸಿ ಬ್ಯಾಂಕಿ ನಲ್ಲಿ ಖಾತೆಯನ್ನು 1 ತಿಂಗಳ ಹಿಂದೆ ಖಾತೆ ತೆರೆದು ಲೋನ್ ಮಾಡಿಸಿರುತ್ತೇನೆ ಎನ್ನುತ್ತಾರೆ.

10. ಹಣವನ್ನು ಕೇಳಲು ಆರೋಪಿ ಒಬ್ಬರೆ ಬಂದಿದ್ದರು. ಹಣವನ್ನು ಅವರ ಅಂಗಡಿಯಲ್ಲಿ ಕೇಳಿದ್ದರು. ಆರೋಪಿ ಹಣ ಕೇಳಿದಾಗ ನಾವಿಬ್ಬರೇ ಇದ್ದೇವು. ಅಷ್ಟೊಂದು

ಹಣವನ್ನು ಏಕೆ ಇಟ್ಟಕೊಂಡಿದ್ದೀರಿ ಎಂದರೆ ಸಾಕ್ಷಿಯು ಮಗಳ ಮದುವೆ ಮಾಡಲು ಹಣವನ್ನು ಇಟ್ಟಿದ್ದೆ ಎನ್ನುತ್ತಾರೆ. ರೇಷ್ಮೇ ಹುಳು ಸಾಗಾಣಿಕೆಯಿಂದ ನನಗೆ ಹಣ ಬಂದಿತ್ತು.

11. ಆರೋಪಿಯ ಮನೆಯ ಯಜಮಾನಿಕೆಯನ್ನು ಅವರ ತಂದೆ ನೋಡುತ್ತಿದ್ದರು ಆದ್ದರಿಂದ ಆರೋಪಿ ನಿಮ್ಮ ಹತ್ತಿರ ಹಣ ಕೇಳಿಲ್ಲ ಎಂದರೆ ಸರಿಯಲ್ಲ. ಅಷ್ಟೊಂದು ಹಣವನ್ನು ಕೊಡುವಷ್ಟ ಸಾಮರ್ಥ್ಯ ಇಲ್ಲ ಎಂದರೆ ಸಾಕ್ಷಿಯು ನಾನು ಪ್ರತಿ ತಿಂಗಳಿಗೆ 30-40 ಸಾವಿರ ರೇಷ್ಮೇ ಸಾಗಾಣಿಕೆಯಿಂದ ದುಡಿಯುತ್ತೇನೆ, ಅದನ್ನು ಹಾಗೆಯೇ ಇಟ್ಟುಕೊಂಡಿರುತ್ತೇನೆ ಮತ್ತು ಹಾಲನ್ನು ಹಾಕುತ್ತೇನೆ ಅದರಿಂದ ನನಗೆ ಹಣ ಬಂದಿತ್ತು ಎನ್ನುತ್ತಾರೆ. ಅರೋಪಿಯ ತಂದೆ ತಾಯಿಯನ್ನು ಕೇಳಿ ನಾನು ಹಣ ಕೊಟ್ಟಿಲ್ಲ.

**ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.

ಪಿಡಬ್ಲ್ಯೂ: 1 ಸಿ.ಸಿ ನಂ.982/2021